# ದುಬಾಯಿನಲ್ಲಿರುವ ಕ್ರೌನ್ ಪ್ಲಾಜಾ ಹೋಟೆಲಿನ ಕೋಣೆಗೆ

(ನನಗೆ ಅಲ್ಲಿ ವಸತಿ ಸೌಲಭ್ಯ ಏರ್ಪಡಿಸಿದ ದುಬಾಯಿ ಸಾಹಿತ್ಯೋತ್ಸವಕ್ಕೆ ಧನ್ಯವಾದಗಳೊಂದಿಗೆ)

ನನ್ನ ಹೋಟೆಲ್ ಕೋಣೆಯು ತುಂಬಾ ಇಷ್ಟವಾಗಿದೆ.
ನನಗೆ ಗೊತ್ತು, ನನ್ನಂತಹವನಿಗಾಗಿ ಇದನ್ನು ರಚಿಸಿಲ್ಲ.
ಡಾಲರ್ ತುಂಬಿದ ಸಂಚಿಗಳನ್ನೂ, ಸಲೂಕಿ ನಾಯಿ ಮತ್ತು ಇಬ್ಬರು ಪತ್ನಿಯರನ್ನು ಹೊಂದಿ ಸುಸ್ತಾದ ವ್ಯಾಪಾರಿಗಾಗಿ ಇದನ್ನು ರಚಿಸಲಾಗಿದೆ.

ನನ್ನ ಕಂಡು ಕೋಣೆ, ಕೋಣೆಯ ಕಂಡು ನಾನು ಬೆರಗಾಗಿದ್ದೇವೆ.
ನಾನು ಯಾಕೆ ಬಿಜಿನೆಸ್ ನ್ಯೂಸ್ ನೋಡುತ್ತಿಲ್ಲ ಅಂತ ಕೋಣೆಗೆ ತಿಳಿಯಬೇಕಿದೆ.
ನನ್ನ ಬಳಿ ಲ್ಯಾಪ್‌ಟಾಪ್ ಏಕಿಲ್ಲ, ಮೊಬೈಲ್ ಏಕಿಲ್ಲ ಮತ್ತು ನಿರಂತರವಾಗಿ ಕರೆಗಳು ಏಕೆ ಬರುತ್ತಿಲ್ಲ ಅಂತ ಕೋಣೆಗೆ ಅಚ್ಚರಿಯಾಗಿದೆ.
ರಾತ್ರಿಯುಡುಗೆ ತೊಟ್ಟ ನಾನು ಕಿಟಕಿಯ ಬಳಿ ಮಿಡುಕುತ್ತಾ, ಬಿಲ್, ಬಾಬ್, ನಿಹಾರ್ ಮತ್ತು ಅಹ್ಮದ್ ಜೊತೆ ಯಾಕೆ ಫೋನಲ್ಲಿ ಮಾತಾಡುತ್ತಿಲ್ಲ ಅಂತ ಕೋಣೆಗೆ ಗೊಂದಲವಾಗಿದೆ.
ಕೋಣೆ ಸಂಖ್ಯೆ 1654, ಈ ಕವಿತೆ ನಿನಗಾಗಿ.

ಕೋಣೆಯೇ, ನೀನು ನನ್ನ ಮನೆಗಿಂತಲೂ ವಿಶಾಲವಾಗಿರುವೆ.
ಕೋಣೆಯೆ, ನಿನಗೆ ದಿನದೆಲ್ಲಾ ಹೊತ್ತು ನೀರು ಸಿಗುತ್ತಿದೆ.
ಪ್ರಾಂಜಲವಾಗಿರುವ ಆ ನೀರಿನಲ್ಲಿ ನಾನು ಆಗಾಗ ಬೆರಳಾಡಿಸುತ್ತಿದ್ದೇನೆ.

ಕೋಣೆಯೆ, ನಗರದ ವೈಭವಯುತ ಬಜಾರುಗಳ ಅದ್ಭುತ ದೃಶ್ಯವನ್ನು ನನಗೆ ದಯಪಾಲಿಸಿರುವೆ.
ಕೋಣೆಯೆ, ನಿನ್ನಲ್ಲಿ ನಾಲ್ಕು ಪೇಂಟಿಂಗ್‌ಗಳಿವೆ, ಅದರಲ್ಲೆರಡು ಟಾಯ್ಲೆಟ್ಟಿನಲ್ಲಿವೆ.
ಕಮೋಡ್ ಮೇಲೆ ಕುಳಿತು ಅದರ ಅರ್ಥವನ್ನು ಗ್ರಹಿಸಲು ಪ್ರಯತ್ನಿಸಿ ಸೋಲುತ್ತೇನೆ.

ಕೋಣೆಯೆ, ಒಂದು ದಿನಕ್ಕೆ ನಿನಗೆ 1950 ದಿರ್ಹಾಮ್‌ಗಳನ್ನು ಕೊಡಬೇಕು. ಅದರ ಮೇಲೆ ಶೇಕಡಾ ಹತ್ತು ಮುನಿಸಿಪಲ್ ತೆರಿಗೆ ಮತ್ತು ಶೇಕಡಾ ಹತ್ತು ಸರ್ವೀಸ್ ತೆರಿಗೆ. ಅಷ್ಟೊಂದು ಹಣವನ್ನು ನಾನು ಈವರೆಗೂ ನನ್ನ ಪದ್ಯಗಳಿಂದ ಗಳಿಸಿಲ್ಲ.

ಕೋಣೆಯೆ, ಆ ಹಣದ ಒಂದು ದಿರ್ಹಾಮ್ ಕೂಡಾ ವ್ಯರ್ಥವಾಗದಂತೆ ಬಳಸಬೇಕೆಂಬ ಯೋಚನೆಯಿಂದ ನನಗೆ ಇಲ್ಲಿ ಒಂಚೂರೂ ನಿದ್ದೆ ಬರುತ್ತಿಲ್ಲ.

ಕೋಣೆಯೆ, ನನ್ನ ಮಂಚದ ಬಳಿಯೊಂದು, ತಲೆಯ ಬಳಿಯೊಂದು ದೀಪಗಳಿವೆ.
ಕೈಯಿಂದ ಮುಟ್ಟಿದರೆ ಸಾಕು ಬೆಳಗುತ್ತವೆ.
ನಾನು ಮುಟ್ಟುತ್ತೇನೆ.
ಮತ್ತೊಮ್ಮೆ ಮುಟ್ಟುತ್ತೇನೆ, ಮಗದೊಮ್ಮೆ ಮುಟ್ಟುತ್ತೇನೆ.
ಮುಟ್ಟಿದರೆ ಸಾಕು, ಆನ್, ಆಫ್, ಆನ್.

